Reg. No. | | | | | | | | | |

**BCMKAL 282**

# Choice Based Credit System IV Semester B.Com. Degree Examination, September 2022
## (2021 – 22 Batch Onwards)
## KANNADA
## Kannada Language

Time : 3 Hours Max. Marks : 80

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) ವ್ಯಕ್ತಿಯ ಆಂತರಿಕ ಬದುಕು ಮತ್ತು ಸಮಾಜದ ಪರಿವರ್ತನೆಯ ಸೂಕ್ಷ್ಮ ವಿವರಗಳು 'ಅಮ್ಮನ ಗುಡ್ಡ' ಕವನದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**ಅಥವಾ**

ದ್ರೌಪದಿಯ ವಸ್ತ್ರಾಪಹರಣದ ಪ್ರಯತ್ನ ಹಾಗೂ ಶ್ರೀಕೃಷ್ಣನ ಸಹಾಯದ ಸಂದರ್ಭವನ್ನು ಕಾವ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) ಕೊಳ್ಳುಬಾಕ ಸಂಸ್ಕೃತಿಯು 'ಶೋಕಿ ದಿನವಾದ ಶೋಕ ದಿನ' ಲೇಖನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

**ಅಥವಾ**

ರತನ್ ಟಾಟಾರವರ ಜೀವನ ಹಾಗೂ ಸಾಧನೆಯನ್ನು ವಿವರಿಸಿ.

3) ಸ್ವಾಮಿ ವಿವೇಕಾನಂದ ಹಾಗೂ ಶ್ರೀರಾಮಕೃಷ್ಣರ ನಡುವಿನ ಸಂಬಂಧದ ಕುರಿತು ಬರೆಯಿರಿ.

**ಅಥವಾ**

ಸ್ವಾಮಿ ವಿವೇಕಾನಂದರ ವಿಶ್ಲೇಷಣೆಯಂತೆ ಭಾರತೀಯರ ದುಃಸ್ಥಿತಿಗೆ ಕಾರಣಗಳೇನು ? ವಿವರಿಸಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಕನ್ನಡ ನಾಡು, ನುಡಿ, ಸಂಸ್ಕೃತಿಯ ಕುರಿತು 'ಕನ್ನಡಿಗರ ತಾಯಿ' ಕವನದಲ್ಲಿ ಕವಿ ಹೇಗೆ ವರ್ಣಿಸಿದ್ದಾರೆ ? ವಿವರಿಸಿ.

**ಅಥವಾ**

'ಇವನ ಹುಟ್ಟಿದ ಹಬ್ಬ' ಕವನದ ಆಶಯವೇನು ?

P.T.O.

2) ಶಿಕ್ಷಕರು ವ್ಯವಸ್ಥೆಯ ಭಾಗವಾಗಿ ಬದುಕಬೇಕಾದ ಅನಿವಾರ್ಯತೆಯನ್ನು ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

'ಕತ್ತಲ ಹಾದಿಯಲ್ಲಿ ದೊಂದಿ ಹಿಡಿದು' ಲೇಖನದ ಮಹತ್ವವನ್ನು ವಿವರಿಸಿ.

3) ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ಸಭಿಕರೆಲ್ಲರ ಕಣ್ಮಣಿಯಾದ ಸಂದರ್ಭವನ್ನು ವಿಶ್ಲೇಷಿಸಿ.

**ಅಥವಾ**

ಸ್ವಾಮಿ ವಿವೇಕಾನಂದರ ಮಾರ್ಗದರ್ಶಕ ಸಂದೇಶಗಳ ಕುರಿತು ಬರೆಯಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಹಾಗೂ ಭಾವಾರ್ಥದೊಂದಿಗೆ ಸ್ವಾರಸ್ಯವನ್ನು ವಿವರಿಸಿ. **(1×5=5)**

ಅಹಹ ಪಾಂಡವರಾಯಪಟ್ಟದ
ಮಹಿಳೆಗಿದು ವಿಧಿಯೇ ಮಹಾಕೃತು
ವಿಹಿತಮಂತ್ರಜಲಾಭಿಷಿಕ್ತಕಚಾಗ್ರೆಗಿದು ವಿಧಿಯೆ।
ಮಿಹಿರಬಿಂಬವ ಕಾಣದಾನೃಪ
ಮಹಿಳೆಗಿದು ವಿಧಿಯೇ ವಿಧಾತ್ರನ
ಕುಹಕವೈ ಸತಿ ಶಿವ ಶಿವಾಯೆಂದರು ಸಭಾಸದರು

**ಅಥವಾ**

ಅರ್ಚನೆ ಪೂಜನೆ ನೇಮವಲ್ಲ;
ಮಂತ್ರ ತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ

IV. ಅ) ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು.
2) ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ.
3) ರಥದಿಂದಿಳಿದು ಪೋಗಿ ಕೌರವ ಬಲವನು ಹತ ಮಾಡಿದವನು ಶಲ್ಯನೊ ಪಾಂಡವರೊ ?
4) ಹೆಣ್ಣು ಮಕ್ಕಳಿಗೆ ತವರಾಸೆ.

ಆ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ನೇಮಿಚಂದ್ರ.
2) ಅಲಿಬಾಬ ಆನ್‌ಲೈನ್ ಮಳಿಗೆ.
3) ಡಾ. ನಿರಂಜನ ವಾನಳ್ಳಿ.
4) ಟಾಟಾ ಕಂಪನಿ.

ಇ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ವಿಶ್ವನಾಥದತ್ತ.
2) ಚ.ನ. ಶಂಕರ್‌ರಾವ್.
3) ನರೇಂದ್ರನ ಬಾಲ್ಯ ಜೀವನ.
4) ಶ್ರೀ ರಾಮಕೃಷ್ಣ ಮಿಶನ್.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(1×12=12)**

1) ಕುಮಾರವ್ಯಾಸನಿಗಿರುವ ಬಿರುದು ಯಾವುದು ?
2) ಗೋವಿಂದ ಪೈಯವರ ಮೊದಲ ಲೇಖನ ಯಾವ ಪತ್ರಿಕೆಯಲ್ಲಿ ಪ್ರಕಟವಾಯಿತು ?
3) ಕನಕದಾಸರ ಹುಟ್ಟೂರು ಯಾವುದು ?
4) 'ಇವನ ಹುಟ್ಟಿದ ಹಬ್ಬ' ಕವನವನ್ನು ಯಾವ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ ?
5) 'ನೂರೆಂಟು ಮಾತು' ಅಂಕಣ ಬರಹದ ಲೇಖಕರು ಯಾರು ?
6) ಡಾ. ನಿರಂಜನ ವಾನಳ್ಳಿಯವರ ಯಾವ ಕಿರುಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿರುತ್ತದೆ ?
7) 'ಒಂಟಿಗಳ ದಿನಾಚರಣೆ'ಯನ್ನು ಆರಂಭಿಸಿದವರು ಯಾರು ?
8) 'ಒಂದು ಕನಸಿನ ಪಯಣ' ಪ್ರವಾಸ ಕಥನದ ಕರ್ತೃ ಯಾರು ?
9) ಮಿಸ್ ಮಾರ್ಗರೆಟ್ ನೋಬಲ್ ಎಂಬಾಕೆ ಮುಂದೆ ಯಾವ ಹೆಸರಿನಿಂದ ಖ್ಯಾತಿಯನ್ನು ಪಡೆದರು ?
10) 'ಸಹಸ್ರದ್ವೀಪೋದ್ಯಾನ' ಎಲ್ಲಿದೆ ?
11) ಸ್ವಾಮಿ ವಿವೇಕಾನಂದರನ್ನು 'ಭಾರತದ ರಾಷ್ಟ್ರೀಯತೆಯ ಜನಕ' ಎಂದು ಕರೆದವರು ಯಾರು ?
12) 'ವಿವೇಕಾನಂದ' ಎಂಬ ಹೊಸ ಹೆಸರಿನ ಧಾರಣೆಗೆ ಸಲಹೆ ನೀಡಿದವರು ಯಾರು ?

---